ಮಾಡಿದರು. ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).

(ಗೊಂದಲ)

ಡಾ.ಜೀವರಾಜ ಆಳ್ವ :- ಮಾನ್ಯ ಉಪಾಧ್ಯಕ್ಷಿಣಿಯವರೇ, you have to protect my interest.

ಉಪಾಧ್ಯಕ್ಷರು :- ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಏನೋ ಹೇಳುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

ಡಾ.ಜೀವರಾಜ ಆಳ್ವ :- ಮಾನ್ಯಮಂತ್ರಿಗಳು ಈಲ್ಡ್ ಆಗುವುದಾದರೆ ಒಂದು ಮಾತು. . . .

Sri M.VEERAPPA MOILY:- I am on my legs. I am not yielding.

Dr. JEEVARAJ ALVA:- I am on my legs too.

ಉಪಾಧ್ಯಕ್ಷರು:- ಅವರು ಹೇಳಿದ ಮೇಲೆ ನಾನು ನಿಮಗೆ ಅವಕಾಶ ಕೊಡುತ್ತೇನೆ.

Dr.JEEVARAJ ALVA :- You have to protect my interest . . .

Sri M.VEERAPPA MOILY :- I am on my legs. . .This is not the way.

(Interruptions)

Mr. DEPUTY SPEAKER:- I have called the Parliamentary Affairs Minister.I will not allow you to speak.

ಡಾ.ಜೀವರಾಜ ಆಳ್ವ:- ನಾನು ಏನು ಹೇಳಬೇಕೋ ಅದನ್ನು ಹೇಳಿ ಹೋಗುತ್ತೇನೆ.

ಉಪಾಧ್ಯಕ್ಷರು:- ಅವರದ್ದು ಆದ ಮೇಲೆ ಹೇಳಿ.

(ಗೊಂದಲ)

ಡಾ.ಜೀವರಾಜ ಆಳ್ವ :- ನಾನು ಕೇಳುತ್ತಿರುವುದು ಮಾನ್ಯ ಸಭಾಧ್ಯಕ್ಷಿಣಿಯವರ ಹತ್ತಿರ You have to protect my interest.

ಉಪಾಧ್ಯಕ್ಷರು:- ನಾನು ಅವರನ್ನು ಕರೆದಿದ್ದೇನೆ, ಮಿಸ್ಟರ್ ಆಳ್ವಾರವರೇ ಕುಳಿತುಕೊಳ್ಳಿ.

ಡಾ.ಜೀವರಾಜ ಆಳ್ವ :- ಅವರು ಹೇಳಿದ ಮೇಲೆ ನನಗೆ ಅವಕಾಶ ಕೊಡಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನನಗೆ ಬಹಳ ಚಿಂತೆಯಾಗಿದೆ. ಏತಕ್ಕೆಂದರೆ ಇದು ಪ್ರಶ್ನೋತ್ತರ ವೇಳೆ. ಸನ್ಮಾನ್ಯ ಯೋಜನಾ ಸಚಿವೆಯರೂ ಕೂಡಾ ತಮ್ಮ ಸ್ಥಾನದಲ್ಲಿ ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾನೂ ಕೂಡ ಮಧ್ಯೆ ಎದ್ದು ನಿಲ್ಲಬೇಕೆಂಬ ಪ್ರಯತ್ನ ಮಾಡಲಿಲ್ಲ. ಆದರೆ ಕ್ಷಮಿಸಬೇಕು, ಎಲ್ಲರೂ ಎದ್ದು ನಿಲ್ಲುವಾಗ ಎದ್ದು ನಿಲ್ಲುವಂಥಹುದು ಸಭ್ಯತೆಗೆ, ಸೌಜನ್ಯತೆಗೆ ಸರಿಯಲ್ಲ ಎಂದು ನಾನು ಎದ್ದು ನಿಂತಿಲ್ಲ. ಎಲ್ಲರಿಗೂ ಅವಕಾಶ ಇರಬೇಕಾಗುತ್ತದೆ. ಈಗ ಪ್ರಮುಖವಾಗಿ ಈ ಪ್ರಶ್ನೆ ಏನು ಎತ್ತಿದ್ದಾರೆ ಅದು ಸರಿ, ಸನ್ಮಾನ್ಯ ಯೋಜನಾ ಸಚಿವೆಯವರೂ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈ ಸದನದಲ್ಲಿ ಅವರಿಗೆ ಅವಕಾಶ ಸಿಗುತ್ತಿಲ್ಲ ಮಾನ್ಯ ರಂಗನಾಥ್‌ರವರು ಸ್ವಲ್ಪ ಈಲ್ಡ್ ಆಗುವುದು ಇದ್ದರೆ.....

ಉಪಾಧ್ಯಕ್ಷರು :- ಈಗ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರನ್ನು ಕರೆದಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್ :- ನಿಂತೂ ನಿಂತೂ ಸಾಕಾಯಿತು.